ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಗರಪಾಲಿಕೆಯಿಂದ ಏನು ಪ್ರಸ್ತಾವನೆ ಬಂದಿದೆ, ಅದನ್ನು ಪರಿಶೀಲಿಸಿ ಮುಂದೆ ಕ್ರಮ ತೆಗೆದುಕೊಳ್ಳುತ್ತೇವೆ.

SBM ಶಾಖೆಗಳಲ್ಲಿ ಗ್ರಾಹಕರಿಗೆ ಆಗುತ್ತಿರುವ ಅನಾನುಕೂಲತೆಗಳು

65 : (671)

ಶ್ರೀ ರವಿಸುಬ್ರಹ್ಮಣ್ಯ ಎಲ್. ಎ (ಬಸವನಗುಡಿ)

(ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ವಿಷಯಗಳಿಗೆ ದಯವಿಟ್ಟು ಉತ್ತರಿಸುವರೇ)

ಅ) ಇತ್ತೀಚಿನ ದಿನಗಳಲ್ಲಿ ಸ್ಟೇಟ್ ಬಾಂಕ್ ಆಫ್ ಮೈಸೂರು ಶಾಖೆಗಳಲ್ಲಿ ಅಡಮಾನ ಸಾಲ ಪಡೆದವರ ಶೇ.60%ರಷ್ಟು ಅಸಲನ್ನು ಮನ್ನಾ ಮಾಡಿರುವ ಪ್ರಕರಣಗಳೆಷ್ಟು?

ಆ) ಈ ರೀತಿಯ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ; (ಈ ಕುರಿತು ಸಂಪೂರ್ಣ ವಲಯವಾರು ಮಾಹಿತಿ ನೀಡುವುದು.)

ಇ) ರೈತನ ಕೃಷಿ ಸಾಲ/ಬೆಳೆ ಸಾಲವನ್ನು ಮನ್ನಾ ಮಾಡದ ಬ್ಯಾಂಕಿನ ವ್ಯವಸ್ಥಾಪಕರು ಹಾಗೂ Controllerಗಳು, ಅಡಮಾನ ಸಾಲವನ್ನು ಮನ್ನಾ ಮಾಡಿ ಪ್ರಕರಣವನ್ನು ಮುಚ್ಚಿಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಅಂತಹ ವ್ಯವಸ್ಥಾಪಕರುಗಳ ವಿರುದ್ಧ ಸಿ.ಸಿ.ಎ. ರೂಲ್ಸ್ 11ರಂತೆ ಶಿಸ್ತು ಕ್ರಮ ಕೈಗೊಳ್ಳುವುದೆ;

ಈ) ಪ್ರಸ್ತುತ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಗಳಲ್ಲಿ ನಿಶ್ಚಿತ ಠೇವಣಿಯಂತಹ ಸೌಲಭ್ಯಗಳನ್ನು ಪಡೆಯಲು ವ್ಯವಸ್ಥಾಪಕರ ಬಳಿ ಹೋದ ಗ್ರಾಹಕರ ವಿರುದ್ಧ ಕಾರಣವಿಲ್ಲದೆ, ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿರುವ ಪ್ರಕರಣಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಕಳೆದ ಒಂದು ವರ್ಷದಲ್ಲಿ ಇಂತಹ ಎಷ್ಟು ಪ್ರಕರಣಗಳು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ಕಂಪ್ಲೇಂಟ್ ಸೆಲ್‌ನಲ್ಲಿ ದಾಖಲಾಗಿರುತ್ತದೆ; (ಸಂಪೂರ್ಣ ಮಾಹಿತಿ ನೀಡುವುದು);

ಊ) ಈ ಪ್ರಕರಣಗಳಲ್ಲಿ ಶಾಮೀಲಾದ ವ್ಯವಸ್ಥಾಪಕರುಗಳ ವಿರುದ್ಧ ಯಾವ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಪ್ರಧಾನ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರುರವರು ನೀಡಿರುವ ವರದಿಯಂತೆ ಯಾವುದು ಇಲ್ಲ

ಆ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದಾಗ್ಯೂ ಸಿ.ಸಿ.ಎ–11 ನಿಯಮಗಳು ಬ್ಯಾಂಕಿನ ವ್ಯವಸ್ಥಾಪಕರಿಗೆ ಅನ್ವಯಿಸುವುದಿಲ್ಲ.

ಈ) ಪೊಲೀಸ್ ಠಾಣೆಗಳಲ್ಲಿ ಬ್ಯಾಂಕಿನಿಂದ ಅಂತಹಯಾವುದೇ ದೂರನ್ನು ದಾಖಲಿಸಿರುವುದಿಲ್ಲ.

ಉ) ಬ್ಯಾಂಕಿನ ವರದಿಯಂತೆ ಕಂಪ್ಲೇಂಟ್ ಸೆಲ್‌ನಲ್ಲಿ ಅಂತಹ ಪ್ರಕರಣಗಳು ದಾಖಲಾಗಿರುವುದಿಲ್ಲ.

ಊ) ಅನ್ವಯಿಸುವುದಿಲ್ಲ.

KARNATAKA LEGISLATIVE ASSEMBY

671

Hon'ble Chief Minister

A) What is the number of incidents where 60% of principal was waived in respect of mortgage loan in State Bank of Mysore during recent days.

B) How many such incidents have come to the notice of the Government; (Region wise information to be given).

C) Whether any incident has come to the notice of Government, where Managers and Controllers of the Bank, who have not waived agricultural loans / crop loans of formers, have waived mortgage loans and

concealed the incident. If so, will disciplinary action be taken against such Managers, as per CCA rules 11.

D) Whether, at present, incidents have come to the notice of Government, where complaints are lodged in Police station, without any reason, against customers who approached the Managers to avail the facility like fixed deposit in branches of State Bank of Mysore.

E) If so, how many such incidents are recorded in complaint cell of State Bank of Mysore during past one year. (To furnish full information).

F) What type of disciplinary action has been taken against Managers involved in these incidents. (full information be furnished).

JAGADISH SHETTAR
(Chief Minister)

A) Reported as NIL by SBM

B) No such incident has come to the notice of Govt.

C) No such incident has come to the notice of Govt. However CCA rules are not applicable to Bank Manager

D) No complaint has been lodged with police station by the Bank

E) As per information received from Bank, No such incident is recorded in complaint cell of the Bank

F) Not Applicable

ಶ್ರೀ ಎಲ್.ಎ.ರವಿಸುಬ್ರಹ್ಮಣ್ಯ : ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರವನ್ನು ಒದಗಿಸಿದೆ. ಪ್ರಧಾನ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸರ್ಕಾರಕ್ಕೆ ಸರಿಯಾದಂಥ ಮಾಹಿತಿಯನ್ನು ಕೊಟ್ಟಿಲ್ಲ. ಆದ್ದರಿಂದ ಮುಂದೆ ಆಧಾರ ಸಮೇತ ಇನ್ನೊಂದು ಬಾರಿ ಈ ಪ್ರಶ್ನೆಯನ್ನು ಬೇರೆ ರೂಪದಲ್ಲಿ ತರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ನೇರವಾಗಿ ನಮ್ಮ ಸಂಪರ್ಕಕ್ಕೆ ಬರುವುದಿಲ್ಲ. ಅವರು ಏನು ಮಾಹಿತಿಯನ್ನು ಕೊಟ್ಟಿದ್ದಾರೋ, ಆ ಮಾಹಿತಿಯನ್ನು ಕೊಟ್ಟಿದ್ದೇನೆ, ಅಷ್ಟೇ.

ರಸ್ತೆಗೆ ಅಡ್ಡಲಾಗಿರುವ ಕಾಂಪೌಂಡ್ ತೆರವುಗೊಳಿಸುವುದು

66 : (446)

ಶ್ರೀ ಸುರೇಶ್‌ಗೌಡ (ನಾಗಮಂಗಲ)

ಅ) ಬಿ.ಬಿ ಎಂ. ಪಿ ವ್ಯಾಪ್ತಿಯ ರಾಜರಾಜೇಶ್ವರಿನಗರ ವಲಯ, ಜ್ಞಾನಭಾರತಿನಗರ, 1ನೇ ಕ್ರಾಸ್‌ನಲ್ಲಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಕಾಂಪೌಂಡ್ ಹಾಗೂ –ತಾತ್ಕಾಲಿಕ ಶೆಡ್‌ನ್ನು ತೆರವುಗೊಳಿಸುವ ಬಗ್ಗೆ ಸದನದಲ್ಲಿ ಐದು ಬಾರಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರೂ ಸಹ ಈವರೆವಿಗೂ ಕಾರ್ಯಗತಗೊಳಿಸದೇ ಇರಲು ಕಾರಣವೇನು;

ಆ) ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

ಇ) ಇಲ್ಲಿಯವರೆಗೆ ಸದರಿ ಕಾಂಪೌಂಡ್ ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಈ) ಕಾಂಪೌಂಡ್ ತೆರವುಗೊಳಿಸಿ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲು ಬೇಕಾದ ಕಾಲಾವಕಾಶವೆಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಜ್ಞಾನಜ್ಯೋತಿನಗರ 1ನೇ ಕ್ರಾಸ್‌ನಲ್ಲಿ ಸ್ವತ್ತಿನ ಸಂಖ್ಯೆ. 47ರಲ್ಲಿ 286.25 ಚದರ ಅಡಿ ಜಾಗ ಖಾಸಗಿ ಸ್ವತ್ತಾಗಿರುತ್ತದೆ. ಇದನ್ನು